# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## ಬೆಂಗಳೂರು – 560 001

## ಅಧಿಸೂಚನೆ ಸಂಖ್ಯೆ ವೈ/03/4 ದಿನಾಂಕ 12.11.2004

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆ ಮತ್ತು ಷರತ್ತುಗಳು) ವಿನಿಮಯಗಳು, 2004

ಪೀಠಿಕೆ

ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಕರಣಗಳಾದ 39(2) (ಡಿ), 40 (ಸಿ), 42(2,3) 86(1)(ಎ)ಗಳೊಂದಿಗೆ ಓದಲಾದ 181ನೆಯ ಪ್ರಕರಣದಿಂದ ಪ್ರದತ್ತವಾದ ಮತ್ತು ಅದರ ಪರವಾಗಿ ಸಮರ್ಥವಾದ ಎಲ್ಲಾ ಇತರ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮುಂದಿನ ವಿನಿಯಮಗಳನ್ನು ರಚಿಸಿದೆ. ಅದೆಂದರೆ :

1. ಸಂಕ್ಷಿಪ್ತ ಶೀರ್ಷಿಕೆ ಮತ್ತು ಪ್ರಾರಂಭ.

   i) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) ವಿನಿಯಮಗಳು, 2004 ಎಂದು ಕರೆಯತಕ್ಕದ್ದು.

   ii) ಈ ವಿನಿಯಮಗಳು ಕರ್ನಾಟಕದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

   iii) ಈ ವಿನಿಯಮಗಳು ರಾಜ್ಯದೊಳಗಿರುವ ಪ್ರಸರಣ ಪದ್ಧತಿ/ಗಳು ಮತ್ತು/ಅಥವಾ ಆಕಸ್ಮಿಕವಾಗಿ ಅಂತಾರಾಜ್ಯ ವಿದ್ಯುಚ್ಛಕ್ತಿ ಪ್ರಸರಣದ ಅಂತಹ ಪದ್ಧತಿ/ಗಳು ಸೇರಿದಂತೆ ರಾಜ್ಯದಲ್ಲಿನ ಲೈಸೆನ್ಸುದಾರ ವಿತರಣಾ ಪದ್ಧತಿಗಳ ಬಳಕೆಗಾಗಿ ಮುಕ್ತ ಅವಕಾಶದ ಗ್ರಾಹಕರಿಗೆ ಅನ್ವಯಿಸತಕ್ಕದ್ದು.

2. ಪರಿಭಾಷೆಗಳು :

   ಈ ವಿನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು

   ಎ) "ಅಧಿನಿಯಮ" ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ 36)

   ಬಿ) "ಆಯೋಗ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

   ಸಿ) "ಗ್ರಾಹಕ" ಎಂದರೆ ಲೈಸೆನ್ಸುದಾರ, ಸರ್ಕಾರ ಅಥವಾ ಸಂದರ್ಭಾನುಸಾರ ಅಂತಹ ಇತರ ವ್ಯಕ್ತಿಗಳ ಕೆಲಸಗಳೊಂದಿಗೆ ವಿದ್ಯುಚ್ಛಕ್ತಿ ಸ್ವೀಕರಣೆಯ ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ಯಾವುದೇ ವ್ಯಕ್ತಿಯ ಯಾವ ಆವರಣಕ್ಕೆ ಸಂಪರ್ಕಗೊಂಡಿರುವುದೂ ಸೇರಿದಂತೆ ಹಾಗೂ ಈ ಅಧಿನಿಯಮ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನುಗಳಂತೆ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿ ಸರಬರಾಜು ವ್ಯವಹಾರದಲ್ಲಿ ತೊಡಗಿರುವ ಲೈಸೆನ್ಸುದಾರ ಅಥವಾ ಸರ್ಕಾರ ಅಥವಾ ಯಾವುದೇ ವ್ಯಕ್ತಿಯಿಂದ ತನ್ನ ಸ್ವಂತ ಬಳಕೆಗಾಗಿ ವಿದ್ಯುಚ್ಛಕ್ತಿ ಸರಬರಾಜು ಪಡೆದಿರುವ ಯಾವುದೇ ವ್ಯಕ್ತಿ.

   ಡಿ. "ಹಾಲಿ ಗ್ರಾಹಕ" ಎಂದರೆ ಈ ವಿನಿಯಮಗಳು ಜಾರಿಗೊಂಡ ದಿನಾಂಕದಿಂದ ಹಾಲಿ ಒಪ್ಪಂದ ಅಥವಾ ಕರ್ನಾಟಕ ಸರ್ಕಾರದ ನೀತಿಯಂತೆ ರಾಜ್ಯದಲ್ಲಿ ಲೈಸೆನ್ಸುದಾರನ ಪ್ರಸರಣ ಪದ್ಧತಿ ಮತ್ತು/ಅಥವಾ ವಿತರಣ ಪದ್ಧತಿಗೆ ಮುಕ್ತ ಅವಕಾಶವನ್ನು ಈಗಾಗಲೇ ಪಡೆಯುತ್ತಿರುವ ವ್ಯಕ್ತಿ.

   ಇ. 'ಸ್ಥಾಪನ' ಎಂದರೆ ಸರಬರಾಜು ಪ್ರಾರಂಭದ ಬಿಂದುವಿನಿಂದ ಆರಂಭವಾಗುವ ಅದೇ ಆವರಣ ಮತ್ತು ಗ್ರಾಹಕನಿಂದ ಅಥವಾ ಆತನ ಪರವಾಗಿ ವೈರಿಂಗ್ ಮಾಡಿ ಸ್ಥಾಪಿಸಿರುವ ಇಡೀ ವಿದ್ಯುತ್ ವೈರುಗಳು, ಜೋಡಣೆಗಳು, ಮೋಟಾರುಗಳು ಮತ್ತು ಸಲಕರಣೆಗಳು.

   ಎಫ್. 'ಕೆಇಆರ್ ಅಧಿನಿಯಮ' ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999.

   ಜಿ. 'ಎಸ್ಎಲ್‌ಡಿಸಿ' ಎಂದರೆ, ಅಧಿನಿಯಮದ 31ನೆಯ ಪ್ರಕರಣದ (1) ಉಪಪ್ರಕರಣದಂತೆ ಸ್ಥಾಪಿತವಾಗಿರುವ ರಾಜ್ಯ ವಿದ್ಯುತ್ ರವಾನೆ ಕೇಂದ್ರ.

ಹೆಚ್. 'ಸಮೀಕ್ಷಾ ಸಂಸ್ಥೆ' ಎಂದರೆ ಈ ವಿನಿಯಮಗಳಲ್ಲಿ 8ನೆಯ ವಿನಿಯಮಗಳಲ್ಲಿ ಪರಿಭಾಷಿಸಿರುವ ನೋಡಲ್ ಏಜೆನ್ಸಿ.

ಐ. 'ಮುಕ್ತ ಅವಕಾಶ' ಎಂದರೆ ಸೂಕ್ತವಾದ ಆಯೋಗದಿಂದ ನಿಗದಿಪಡಿಸಿದ ವಿನಿಯಮಗಳನುಸಾರ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿರುವ ಯಾವುದೇ ಲೈಸೆನ್ಸುದಾರ ಅಥವಾ ಗ್ರಾಹಕ ಅಥವಾ ಯಾವುದೇ ವ್ಯಕ್ತಿಯಿಂದ ಪ್ರಸರಣ ಮಾರ್ಗಗಳು ಅಥವಾ ವಿತರಣಾ ಪದ್ಧತಿ ಅಥವಾ ಅಂತಹ ಮಾರ್ಗಗಳಲ್ಲಿ ಸೇರಿರುವ ಸೌಲಭ್ಯಗಳು ಅಥವಾ ಪದ್ಧತಿಯ ಬಳಕೆಗಾಗಿ ತಾರತಮ್ಯವಿಲ್ಲದ ಉಪಬಂಧ.

ಜೆ. 'ಮುಕ್ತ ಅವಕಾಶದ ಗ್ರಾಹಕ' ಎಂದರೆ ತನ್ನ ಸರಬರಾಜು ಪ್ರದೇಶದಲ್ಲಿ ವಿತರಣ ಲೈಸೆನ್ಸುದಾರನನ್ನು ಹೊರತು ಪಡಿಸಿದ ವ್ಯಕ್ತಿಯಿಂದ ವಿದ್ಯುತ್ ಸರಬರಾಜನ್ನು ಸ್ವೀಕರಿಸುವುದಕ್ಕೆ ಆಯೋಗದಿಂದ ಅನುಮತಿ ಪಡೆದ ಗ್ರಾಹಕ ಮತ್ತು ಅದರಲ್ಲಿ ಮುಕ್ತ ಅವಕಾಶದಿಂದ ವಿದ್ಯುತ್ ಪಡೆಯಲು ಉದ್ದೇಶಿಸಿರುವ ಅಥವಾ ಪಡೆದಿರುವ ವಿದ್ಯುತ್ ಉತ್ಪಾದನಾ ಕಂಪನಿ ಮತ್ತು ಲೈಸೆನ್ಸುದಾರರು ಎಂಬುದು ಪರಿಭಾಷೆಯಲ್ಲಿ ಸೇರಿದೆ.

ಕೆ. ಯಾವುದೇ ಕಂಪನಿ ಅಥವಾ ನಿಗಮಿತ ನಿಕಾಯ ಅಥವಾ ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ ಅವರಲ್ಲಿ ಸೇರಿರಬಹುದು ಅಥವಾ ಇಲ್ಲದಿರಬಹುದು ಅಥವಾ ಕೃತಕ ನ್ಯಾಯಿಕ ವ್ಯಕ್ತಿಯಲ್ಲಿ "ವ್ಯಕ್ತಿ" ಸೇರತಕ್ಕದ್ದು.

ಎಲ್. ಯಾವುದೇ ಭೂಮಿ, ಕಟ್ಟಡ ಅಥವಾ ನಿರ್ಮಾಣದಲ್ಲಿ "ಆವರಣ" ಸೇರುತ್ತದೆ.

ಎಂ. 'ರಾಜ್ಯ ಪ್ರಸರಣ ಘಟಕ' ಎಂದರೆ ಅಧಿನಿಯಮದ 39ನೆಯ ಪ್ರಕರಣದ (1) ಉಪಪ್ರಕರಣದಂತೆ ರಾಜ್ಯ ಸರ್ಕಾರ ನಿರ್ದಿಷ್ಟಪಡಿಸಿದಂತೆ ಮಂಡಳಿ ಅಥವಾ ರಾಜ್ಯ ಕಂಪನಿ.

ಎನ್. 'ವೀಲಿಂಗ್' ಎಂದರೆ ಅಧಿನಿಯಮದ 62ನೆಯ ಪ್ರಕರಣದಂತೆ ನಿಗದಿಪಡಿಸಬಹುದಾದ ಶುಲ್ಕಗಳ ಸಂದಾಯದ ಮೇಲಿನ ಸಾಗಣೆಗಾಗಿ ಬಳಸಿದ ವಿತರಣಾ ಪದ್ಧತಿ ಮತ್ತು ಸಂದರ್ಭಾನುಸಾರ ಸಂಬಂಧಿಸಿದ ಪ್ರಸರಣ ಲೈಸೆನ್ಸುದಾರರ ಅಥವಾ ವಿತರಣಾ ಲೈಸೆನ್ಸುದಾರರ ಕಾರ್ಯಾಚರಣೆ,

ಈ ವಿನಿಯಮಗಳಲ್ಲಿ ಬಳಸಿರುವ ಹಾಗೂ ಮೇಲೆ ಪರಿಭಾಷಿಸದಿರುವ ಪದಗಳು ಅಥವಾ ಪದಾವಳಿಗಳು ಆದರೆ ಅಧಿನಿಯಮ ಅಥವಾ ಕ.ವಿ.ಸು. ಅಧಿನಿಯಮದಲ್ಲಿ ಪರಿಭಾಷಿಸದಿದ್ದರೂ, ಆ ಅಧಿನಿಯಮಗಳಲ್ಲಿ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು, ಅಧಿನಿಯಮ ಮತ್ತು ಕ.ವಿ.ಸು. ಅಧಿನಿಯಮಗಳಲ್ಲಿನ ಪದಗಳು ಮತ್ತು ಪದಾವಳಿಗಳಲ್ಲಿ ಯಾವುದೇ ಅಸಂಗತೆಯುಂಟಾದ ಪ್ರಕರಣದಲ್ಲಿ ಅಧಿನಿಯಮದ ಉಪಬಂಧಗಳು ಚಾಲ್ತಿಯಲ್ಲಿರತಕ್ಕದ್ದು.

3. ಮುಕ್ತ ಅವಕಾಶದ ಅನುಮತಿಗೆ ಮಾನದಂಡ :

1) ರಾಜ್ಯ ಗ್ರಿಡ್ ಸಂಹಿತೆಯಲ್ಲಿ ವಿಧಿಸಿರುವಂತೆ ಪ್ರಸರಣ ಯೋಜನಾ ಮಾನದಂಡ ಮತ್ತು ವಿತರಣಾ ಯೋಜನಾ ಸಂಹಿತೆಯನುಸಾರ ದೀರ್ಘಾವಧಿ ಮುಕ್ತ ಅವಕಾಶಕ್ಕೆ ಅನುಮತಿಸತಕ್ಕದ್ದು.

2) ಈ ಮುಂದಿನವುಗಳನ್ನು ಬಳಸಲು ಕೋರಿಕೆಗೆ ಅನುಕೂಲ ಮಾಡಿಕೊಡಲು ಅಲ್ಪಾವಧಿಯ ಮುಕ್ತ ಅವಕಾಶಕ್ಕೆ ಅನುಮತಿಸತಕ್ಕದ್ದು

ಎ) ಅಂತರ್ಗತ ವಿನ್ಯಾಸದಲ್ಲಿ ಹೆಚ್ಚಿನ ಅವಕಾಶ.

ಬಿ) ವಿದ್ಯುತ್ ಹರಿವಿನ ವ್ಯತ್ಯಾಸದ ಕಾರಣದಿಂದ ಲಭ್ಯವಿರುವ ಹೆಚ್ಚಿನ ಜಾಗ ಮತ್ತು

ಸಿ) ಭವಿಷ್ಯದ ಲೋಡನ್ನು ನಿಭಾಯಿಸಲು ರಚಿಸಿರುವ ಒಳ ರಚಿತ ಹೆಚ್ಚಿನ ಪ್ರಸರಣ ಪದ್ಧತಿಯ ಸಾಮರ್ಥ್ಯ ಮತ್ತು ವಿತರಣಾ ಪದ್ಧತಿ ಸಾಮರ್ಥ್ಯದ ಕಾರಣದಿಂದ ಲಭ್ಯವಿರುವ ಹೆಚ್ಚಿನ ಅವಕಾಶ.

4. ಮುಕ್ತ ಅವಕಾಶ ಮತ್ತು ಹಂತ ಹಂತಕ್ಕಾಗಿ ಅರ್ಹತೆ.

1) ಈ ವಿನಿಯಮಗಳ ಉಪಬಂಧಗಳಿಗೊಳಪಟ್ಟು ಮುಕ್ತ ಅವಕಾಶದ ಗ್ರಾಹಕರು ರಾಜ್ಯದೊಳಗಿನ ರಾಜ್ಯ ಪ್ರಸರಣ ಸಂಸ್ಥೆ ಅಥವಾ ಯಾವುದೇ ಪ್ರಸರಣ ಲೈಸೆನ್ಸುದಾರ/ರ ಪ್ರಸರಣ ಪದ್ಧತಿ ಮತ್ತು ರಾಜ್ಯದೊಳಗಿನ ವಿತರಣ ಲೈಸೆನ್ಸುದಾರರ ವಿತರಣಾ ಪದ್ಧತಿ/ಗಳಿಗೆ ಮುಕ್ತ ಅವಕಾಶಕ್ಕೆ ಅರ್ಹರಾಗಿರತಕ್ಕದ್ದು.

2. ಅಂತಹ ಮುಕ್ತ ಅವಕಾಶವು, ಆಯೋಗವು ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಅಂತಹ ಶುಲ್ಕಗಳ ಸಂದಾಯ ಮಾಡಿ ಮುಕ್ತ ಅವಕಾಶದ ಗ್ರಾಹಕರು ಬಳಸುವುದಕ್ಕಾಗಿ ಲಭ್ಯವಿರತಕ್ಕದ್ದು.

3) ಅಧಿನಿಯಮದ 9ನೆಯ ಪ್ರಕರಣದ ಉಪಬಂಧಗಳಂತೆ ನಿರ್ಬಂಧಿತ ವಿದ್ಯುತ್ ಉತ್ಪಾದನಾ ಘಟಕ ನಿರ್ಮಿಸಿರುವ ಪ್ರತಿ ವ್ಯಕ್ತಿಯು ಮುಕ್ತ ಅವಕಾಶದ ಹಕ್ಕನ್ನು ಹೊಂದಿರತಕ್ಕದ್ದು.

| | | |
|---|---|---|
| ಹಂತ – 1 | 66 ಕೆ.ವಿ. ಮತ್ತು ಅದಕ್ಕೂ ಹೆಚ್ಚಿನ ವೋಲ್ಟೇಜ್ ಹಂತದೊಂದಿಗೆ 15 ಮೆ.ವಾ ಮತ್ತು ಅದಕ್ಕೂ ಹೆಚ್ಚಿನ ಬೇಡಿಕೆ ಒಪ್ಪಂದದೊಂದಿಗಿನ ಎಲ್ಲಾ ಹೆಚ್‌ಟಿ ಸ್ಥಾಪನಗಳು | 10ನೆಯ ಜೂನ್ 2005 ರಿಂದ |
| ಹಂತ – 2 | 33 ಕೆ.ವಿ. ಮತ್ತು ಅದಕ್ಕೂ ಹೆಚ್ಚಿನ ವೋಲ್ಟೇಜ್ ಹಂತದೊಂದಿಗೆ 05 ಮೆ.ವಾ ಮತ್ತು ಅದಕ್ಕೂ ಹೆಚ್ಚಿನ ಬೇಡಿಕೆ ಒಪ್ಪಂದದೊಂದಿಗಿನ ಎಲ್ಲಾ ಹೆಚ್‌ಟಿ ಸ್ಥಾಪನಗಳು | 1ನೆಯ ಏಪ್ರಿಲ್ 2006 ರಿಂದ |
| ಹಂತ – 3 | 11 ಕೆ.ವಿ. ಮತ್ತು ಅದಕ್ಕೂ ಹೆಚ್ಚಿನ ವೋಲ್ಟೇಜ್ ಹಂತದೊಂದಿಗೆ 3 ಮೆ.ವಾ ಮತ್ತು ಅದಕ್ಕೂ ಹೆಚ್ಚಿನ ಬೇಡಿಕೆ ಒಪ್ಪಂದದೊಂದಿಗಿನ ಎಲ್ಲಾ ಹೆಚ್‌ಟಿ ಸ್ಥಾಪನಗಳು | 1ನೆಯ ಏಪ್ರಿಲ್ 2006 ರಿಂದ |
| ಹಂತ – 4 | 1 ಮೆ.ವಾ ಮತ್ತು ಅದಕ್ಕೂ ಹೆಚ್ಚಿನ ಬೇಡಿಕೆ ಒಪ್ಪಂದದೊಂದಿಗಿನ ಎಲ್ಲಾ ಹೆಚ್‌ಟಿ ಸ್ಥಾಪನಗಳು | 1ನೆಯ ಏಪ್ರಿಲ್ 2008 ರಿಂದ |

4. ಈ ಮುಂದಿನ ಹಂತಗಳಲ್ಲಿ ಪ್ರಸರಣ ಲೈಸೆನ್ಸುದಾರ/ರು ಮತ್ತು ವಿತರಣ ಲೈಸೆನ್ಸುದಾರರಿಂದ ಗ್ರಾಹಕರಿಗೆ ಕಾರ್ಯಾಚರಣೆಯ ನಿರ್ಬಂಧಗಳು ಮತ್ತು ಇತರ ಸಂಗತ ಅಂಶಗಳಿಗೊಳಪಟ್ಟು ಮುಕ್ತ ಅವಕಾಶಕ್ಕೆ ಅನುಮತಿಕೊಡತಕ್ಕದ್ದು :

5. ಹಂತ – Iರ ಅನುಷ್ಠಾನದ ಆಧಾರದ ಮೇಲೆ ಆಯೋಗವು ಅವಶ್ಯವೆನಿಸಬಹುದಾದಂತೆ ನಂತರದ ಹಂತಗಳಲ್ಲಿ ಮುಕ್ತ ಅವಕಾಶಕ್ಕೆ ಅನುಮತಿಸುವುದಕ್ಕಾಗಿ ಮೇಲಿನ ಅನುಸೂಚಿಯನ್ನು ಪರಿಷ್ಕರಣೆಗೊಳಿಸಬಹುದಾಗಿದೆ. .

6. ಆಯೋಗವು, ಮೇಲಿನ ಕಂಡಿಕೆ 4(4)ರಲ್ಲಿ ನಿರ್ದಿಷ್ಟ ಪಡಿಸಿರುವುದಕ್ಕೆ ಹೊರತಾದ ಗ್ರಾಹಕರಿಗೆ ಕಾರ್ಯ ಸಾಧ್ಯವೆಂದು ಪರಿಗಣಿಸಬಹುದಾದ ಸಮಯದಲ್ಲಿ ಮುಕ್ತ ಅವಕಾಶಕ್ಕೆ ಅವಕಾಶ ನೀಡಬಹುದಾಗಿದೆ.

5. ಹಾಲಿ ಸಂಸ್ಥೆಗಳಿಗೆ ಅವಕಾಶ.

1) ಹಾಲಿ ವಿತರಣ ಲೈಸೆನ್ಸುದಾರರು

ಹಾಲಿ ಒಪ್ಪಂದ/ಗಳು ಅಥವಾ ವ್ಯವಸ್ಥೆಯಂತೆ ನಿರ್ದಿಷ್ಟಪಡಿಸಿದ ನಿಬಂಧನೆಗಾಗಿ ರಾಜ್ಯದೊಳಗಿನ ಪ್ರಸರಣ ಪದ್ಧತಿ/ಗಳು ಮತ್ತು/ ಅಥವಾ ವಿತರಣ ಪದ್ಧತಿ/ಗಳಿಗೆ ದೀರ್ಘಾವಧಿಯ ಮುಕ್ತ ಅವಕಾಶದ ಗ್ರಾಹಕರಾಗಿರುವ ಗ್ರಾಹಕರನ್ನು ಹಾಲಿ ವಿತರಣ ಲೈಸೆನ್ಸುದಾರ/ರು ಎಂದು ಪರಿಭಾವಿಸತಕ್ಕದು ಮತ್ತು ಆಗಾಗ್ಗೆ ಆಯೋಗವು ನಿರ್ದಿಷ್ಟಪಡಿಸಬಹುದಾದಂತೆ ಮತ್ತು ಅನ್ವಯವಾಗುವಂತೆ ಪ್ರಸರಣ ಶುಲ್ಕಗಳು, ವೀಲಿಂಗ್ ಶುಲ್ಕಗಳು ಮತ್ತು ಇತರ ಶುಲ್ಕಗಳನ್ನು ಸಂದಾಯ ಮಾಡತಕ್ಕದ್ದು.

ಹಾಲಿ ವಿತರಣ ಲೈಸೆನ್ಸುದಾರ/ರು, ಈ ವಿನಿಯಮಗಳು ಜಾರಿಗೆ ಬರುವ 60 ದಿನಗಳೊಳಗಾಗಿ ರಾಜ್ಯದೊಳಗಿನ ಪ್ರಸರಣ ಪದ್ಧತಿ/ ಗಳು ಮತ್ತು/ಅಥವಾ ವಿತರಣ/ಪದ್ಧತಿ/ಗಳು, ತಾವು ಬಳಸುವ ವಿವರಗಳನ್ನು, ಎಸ್‌ಟಿಯು, ಎಸ್‌ಎಲ್‌ಡಿಸಿ ಮತ್ತು ಆಯೋಗಕ್ಕೆ ಒದಗಿಸತಕ್ಕದ್ದು.

2) ಹಾಲಿ ವಿತರಣ ಲೈಸೆನ್ಸುದಾರರನ್ನು ಹೊರತುಪಡಿಸಿದ ಹಾಲಿ ಗ್ರಾಹಕರು :

ಹಾಲಿ ಗ್ರಾಹಕ/ರು, ಅಧಿನಿಯಮದೊಂದಿಗೆ ಅವು ಅಸಂಗತವಾಗದವರೆಗೆ ಆ ಒಪ್ಪಂದಗಳು ಅಥವಾ ನೀತಿಗಳಲ್ಲಿ ನಿರ್ದಿಷ್ಟಪಡಿಸಿದ ಅವಧಿಗಾಗಿ ಚಾಲ್ತಿ ಒಪ್ಪಂದಗಳು ಅಥವಾ ಸರ್ಕಾರದ ನೀತಿಗಳ ಅನುಸಾರ ಮುಕ್ತ ಅವಕಾಶ ಪಡೆಯುವುದನ್ನು ಮುಂದುವರಿಸಬಹುದಾಗಿದೆ.

ಪರಂತು, ನಂತರ ಚಾಲ್ತಿಯಲ್ಲಿರುವ ಗ್ರಾಹಕರು, ಕಾಲಕಾಲಕ್ಕೆ ಆಯೋಗವು ನಿರ್ದಿಷ್ಟಪಡಿಸಬಹುದಾದಂತೆ ಅನ್ವಯವಾಗುವ ಸರ್ಚಾರ್ಜ್ ಮತ್ತು ಇತರ ಶುಲ್ಕಗಳನ್ನು ಸಂದಾಯ ಮಾಡತಕ್ಕದ್ದು.

ಪರಂತು, ಅಂತಹ ಗ್ರಾಹಕರ ಸಂಬಂಧದಲ್ಲಿ ನಂತರದ ಅವಧಿಗಾಗಿ ಮುಕ್ತ ಅವಕಾಶವು ಈ ವಿನಿಯಮಗಳ ಉಪಬಂಧಗಳನುಸಾರ ನಡೆಯುತಕ್ಕದ್ದು.

ಪರಂತು, ಮುಕ್ತ ಅವಕಾಶದಂತೆ ಈಗಾಗಲೇ ಒಪ್ಪಂದವಾಗಿರುವ ಹೆಚ್ಚುವರಿ ಸಾಮರ್ಥ್ಯವನ್ನು ಹಾಲಿ ಗ್ರಾಹಕರು ಹೆಚ್ಚುವರಿ ಸಾಮರ್ಥ್ಯವನ್ನೇನಾದರೂ ಕೋರಿದ್ದಲ್ಲಿ, ಹೆಚ್ಚುವರಿ ಸಾಮರ್ಥ್ಯ ಕೋರಿರುವವರಿಗೆ ಮುಕ್ತ ಅವಕಾಶಕ್ಕಾಗಿ ಹೊಸ ಅರ್ಜಿಯೆಂದು ಪರಿಗಣಿಸಬೇಕು.

6. ಮುಕ್ತ ಅವಕಾಶದ ಗ್ರಾಹಕರ ಪ್ರವರ್ಗೀಕರಣ.

1) ರಾಜ್ಯದೊಳಗಿನ ಪ್ರಸರಣ ಮತ್ತು/ಅಥವಾ ವಿತರಣಾ ಪದ್ಧತಿಯ ಬಳಕೆಯ ಅವಧಿಯಾಧಾರದ ಮೇಲೆ ಮುಕ್ತ ಅವಕಾಶದ ಗ್ರಾಹಕರನ್ನು ಈ ಮುಂದಿನ ಪ್ರವರ್ಗಗಳಾಗಿ ವರ್ಗೀಕರಿಸತಕ್ಕದ್ದು :

(ಎ) ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕ – ವ್ಯಕ್ತಿಗಳು ಐದು ವರ್ಷಗಳಿಗಿಂತ ಕಡಿಮೆ ಅವಧಿಗಾಗಿ ಮುಕ್ತ ಅವಕಾಶವನ್ನು ಪಡೆಯುತ್ತಿರುವ ಅಥವಾ ಪಡೆಯಲು ಉದ್ದೇಶಿಸಿರುವುದು.

(ಬಿ) ಐದು ವರ್ಷಗಳಿಗಿಂತ ಅಥವಾ ಅದಕ್ಕೆ ಸಮಾನವಾದ ಅವಧಿಗಾಗಿ ಮುಕ್ತ ಅವಕಾಶ ಪಡೆಯುತ್ತಿರುವ ಅಥವಾ ಪಡೆಯಲು ಉದ್ದೇಶಿಸಿರುವ ದೀರ್ಘಾವಧಿಯ ಮುಕ್ತ ಅವಕಾಶದ ಗ್ರಾಹಕರು – ವ್ಯಕ್ತಿಗಳು.

2) ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕರು ಅವಧಿ ಮುಗಿದ ನಂತರವೂ ಹೊಸ ಮುಕ್ತ ಅವಕಾಶ ಪಡೆಯಲು ಅರ್ಹನಾಗಿರತಕ್ಕದ್ದು ಮತ್ತು ಅದಕ್ಕಾಗಿ ಸಾಮರ್ಥ್ಯ ಹಂಚಿಕೆಗಾಗಿ ಹೊಸ ಅರ್ಜಿದಾರನೆಂದು ಪರಿಗಣಿಸತಕ್ಕದ್ದು.

7. ಹಂಚಿಕೆ ಆದ್ಯತೆ

1) ಈ ಮುಂದಿನ ಮಾನದಂಡದ ಮೇಲೆ ಮುಕ್ತ ಅವಕಾಶದ ಅನುಮತಿಗಾಗಿ ಆದ್ಯತೆಯನ್ನು ನಿರ್ಧರಿಸತಕ್ಕದ್ದು :

ಎ) ದೀರ್ಘಾವಧಿಗಾಗಿ ವಿತರಣಾ ಲೈಸೆನ್ಸುದಾರ

ಬಿ) ದೀರ್ಘಾವಧಿಗಾಗಿ ಇತರ ಮುಕ್ತ ಅವಕಾಶದ ಗ್ರಾಹಕರು

ಸಿ) ಅಲ್ಪಾವಧಿಗಾಗಿ ವಿತರಣ ಲೈಸೆನ್ಸುದಾರ

ಡಿ) ಅಲ್ಪಾವಧಿಗಾಗಿ ಇತರ ಮುಕ್ತ ಅವಕಾಶದ ಗ್ರಾಹಕರು.

2) ಒಂದು ಪ್ರವರ್ಗದೊಳಗಿನ ಮುಕ್ತ ಅವಕಾಶದ ಗ್ರಾಹಕರಲ್ಲಿ, ದೀರ್ಘಾವಧಿಗಾಗಿ ಮುಕ್ತ ಅವಕಾಶಕ್ಕಾಗಿ ಅರ್ಜಿ ಸಲ್ಲಿಸುವ ವ್ಯಕ್ತಿ ಯಾವುದೇ ನೀಡಿದ ಸಮಯದಲ್ಲಿ ಅಲ್ಪಾವಧಿಗಾಗಿ ಅರ್ಜಿಸಲ್ಲಿಸುವ ವ್ಯಕ್ತಿಗಿಂತ ಆದ್ಯತೆ ಹೊಂದಿರತಕ್ಕದ್ದು.

3) ಈ ಮೇಲಿನ ಕಂಡಿಕೆಗೊಳಪಟ್ಟು ಮೊದಲು ಬಂದವರಿಗೆ ಮೊದಲು ನೀಡುವ ಆಧಾರದ ಮೇಲೆ ಮುಕ್ತ ಅವಕಾಶದ ಅನುಮತಿಗಾಗಿ ನಿರ್ಧರಿಸತಕ್ಕದ್ದು.

4) ಕಾಲದ ನಿಬಿಡತೆಯ ನಡುವೆ ಅಲ್ಪಾವಧಿಯ ಮುಕ್ತ ಅವಕಾಶದ ಅನುಕೂಲ ಒದಗಿಸಬೇಕಾದ ಪ್ರಕರಣದಲ್ಲಿ, ಅಲ್ಪಾವಧಿಯ ಬಳಕೆದಾರರಿಗಾಗಿ ನಿಬಿಡವಲ್ಲದ ಬೆಲೆಗೆ ಸಮಾನವಾದ ತಳದ ಬೆಲೆಯೊಂದಿಗೆ ಫ್ಯಾಕ್ಸ್/ಇ-ಅಂಚೆಯ ಬಿಡ್ಡುಗಳನ್ನು ಸಮೀಕ್ಷಾ ಸಂಸ್ಥೆ ಆಹ್ವಾನಿಸತಕ್ಕದ್ದು. ಹಂಚಿಕೆಯನ್ನು ಉದ್ಧೃತ ದರಗಳು ಸಮಾನವಾಗಿದ್ದ ಪ್ರಕರಣದಲ್ಲಿ ಹಂಚಿಕೆಯನ್ನು ಕೋರಿರುವ ಸಾಮರ್ಥ್ಯದ ದರದ ಆಧಾರದ ಮೇಲೆ ಮಾಡತಕ್ಕದ್ದು, ಕೋರಿದ್ದ ಸಾಮರ್ಥ್ಯಕ್ಕಿಂತ ಕಡಿಮೆ ಸಾಮರ್ಥ್ಯದ ಹಂಚಿಕೆಯನ್ನು ಗ್ರಾಹಕನು ಪಡೆಯುತ್ತಿದ್ದಲ್ಲಿ, ಆತನಿಂದ ಉದ್ಧೃತವಾಗಿರುವ ದರವನ್ನು ಸಂದಾಯ ಮಾಡತಕ್ಕದ್ದು. ಇತರ ಎಲ್ಲಾ ಅರ್ಜಿದಾರರು ಕೋರಿದ ಸಾಮರ್ಥ್ಯದ ಪೂರ್ಣ ಹಂಚಿಕೆಯನ್ನು ಪಡೆಯುತ್ತಿರುವ ಕೊನೆಯ ಅರ್ಜಿದಾರನು ಉದ್ಧೃತಗೊಳಿಸಿರುವ ದರದಂತೆ ಶುಲ್ಕಗಳನ್ನು ಸಂದಾಯ ಮಾಡತಕ್ಕದ್ದು.

8. ಸಮೀಕ್ಷಾ ಸಂಸ್ಥೆ.

1) ಸಮೀಕ್ಷಾ ಸಂಸ್ಥೆಯು, ಪದ್ಧತಿಯನ್ನು ಬಳಸುತ್ತಿದ್ದಲ್ಲಿ ರಾಜ್ಯ ಪ್ರಸರಣ ಸಂಸ್ಥೆಗೆ ದೀರ್ಘಾವಧಿಯ ಮುಕ್ತ ಅವಕಾಶಕ್ಕಾಗಿ ವ್ಯವಸ್ಥೆ ಮಾಡತಕ್ಕದ್ದು; ಅಲ್ಲದಿದ್ದರೆ, ಯಾರ ಪ್ರದೇಶದಲ್ಲಿ ವಿದ್ಯುತ್ ಸ್ವೀಕರಣ ಬಿಂದುವಿರುವ ಸಂಬಂಧಿತ ವಿತರಣ ಲೈಸೆನ್ಸುದಾರನಾಗಿರತಕ್ಕದ್ದು.

2) ಅಲ್ಪಾವಧಿಯ ಮುಕ್ತ ಅವಕಾಶಕ್ಕಾಗಿ ರಾಜ್ಯ ವಿದ್ಯುತ್ ರವಾನೆ ಕೇಂದ್ರವು ಸಮೀಕ್ಷಾ ಸಂಸ್ಥೆಯಾಗಿರತಕ್ಕದ್ದು.

3) ಮುಕ್ತ ಅವಕಾಶಕ್ಕೆ ವ್ಯವಸ್ಥೆ ಮಾಡುವಾಗ ಪ್ರಸರಣ ಲೈಸೆನ್ಸುದಾರ/ರು, ವಿತರಣ ಲೈಸೆನ್ಸುದಾರ/ರು ಮತ್ತು ರಾಜ್ಯ ವಿದ್ಯುತ್ ರವಾನೆ ಕೇಂದ್ರ (ಎಸ್‌ಎಲ್‌ಡಿಸಿ)ಗಳು ಸೂಕ್ತ ಸಮನ್ವಯವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

9. **ಮುಕ್ತ ಅವಕಾಶಕ್ಕಾಗಿ ಅರ್ಜಿ ಸಲ್ಲಿಸಲು ವ್ಯವಹಾರಗಳು.**

1) ವಿದ್ಯುತ್ ಮುಕ್ತ ಅವಕಾಶವನ್ನು ಪಡೆಯಬಯಸುವ ಗ್ರಾಹಕನು ಆಯಾ ಪ್ರದೇಶದ ವಿತರಣಾ ಲೈಸೆನ್ಸುದಾರನಿಗೆ ಬರೆದ ಪ್ರತಿಯೊಂದಿಗೆ ಸಂಬಂಧಿಸಿದ ಸಮೀಕ್ಷಾ ಸಂಸ್ಥೆಗೆ ಮುಕ್ತ ಅವಕಾಶಕ್ಕಾಗಿ ಅರ್ಜಿಯೊಂದನ್ನು ಸಲ್ಲಿಸತಕ್ಕದ್ದು.

2) ಸಮೀಕ್ಷಾ ಸಂಸ್ಥೆಯು ನಿಗದಿಪಡಿಸಬಹುದಾದಂತೆ ಅಗತ್ಯವಿರುವ ಸಾಮರ್ಥ್ಯ, ತಂತಿಗಳನ್ನು ಕೂಡಿಸುವ ಬಿಂದು, ವಿದ್ಯುತ್ ಪಡೆಯುವ ಬಿಂದು, ವೋಲ್ಟೇಜ್ ಹಂತ, ಹಂತದ ವ್ಯವಸ್ಥೆ, ಮುಕ್ತ ಅವಕಾಶ ಪಡೆಯುವ ಅವಧಿ, ಅತ್ಯಧಿಕ ವಿದ್ಯುತ್ ಹೊರೆ/ವೇಳೆ, ಸರಾಸರಿ ಹೊರೆ ಮತ್ತು ಇತರ ಹೆಚ್ಚುವರಿ ಮಾಹಿತಿಯಂತಹ ವಿವರಗಳನ್ನು ಅರ್ಜಿಯಲ್ಲಿ ನೀಡತಕ್ಕದ್ದು.

3) ಸಮೀಕ್ಷಾ ಸಂಸ್ಥೆಯು, ನಿರಂತರವಾಗಿ ಸ್ವೀಕರಿಸಿದ ಅರ್ಜಿಗಳ ವಿವರಗಳು ಮತ್ತು ಅರ್ಜಿಯ ಸ್ಥಾನಮಾನಗಳ ವಿವರಣೆಗಳನ್ನು ತನ್ನ ವೆಬ್‌ಸೈಟಿನಲ್ಲಿ ಪ್ರಕಾಶನಗೊಳಿಸಿ, ಸಾರ್ವಜನಿಕರಿಗೆ ದೊರೆಯುವಂತೆ ಮಾಡತಕ್ಕದ್ದು.

4) ಸಮೀಕ್ಷಾ ಸಂಸ್ಥೆಯು, ಈ ವಿನಿಯಮಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಅಗತ್ಯ ಮಾರ್ಗಸೂಚಿಗಳು, ಕಾರ್ಯ ವಿಧಾನಗಳು ಮತ್ತು ಅರ್ಜಿ ನಮೂನೆಗಳನ್ನು ಬಿಡುಗಡೆ ಮಾಡತಕ್ಕದ್ದು.

5) ಅರ್ಜಿಯೊಂದಿಗೆ ದೀರ್ಘಾವಧಿ ಗ್ರಾಹಕರು ರೂ. 5000-00 ಮತ್ತು ಅಲ್ಪಾವಧಿ ಗ್ರಾಹಕ ರೂ. 1000-00 ರೂಪಾಯಿಗಳನ್ನು ಹಿಂತಿರುಗಿಸಲಾಗದ ಕಾರ್ಯವ್ಯವಹರಣ ಶುಲ್ಕವೆಂದು ಸಲ್ಲಿಸತಕ್ಕದ್ದು.

6) ಸಮೀಕ್ಷಾ ಸಂಸ್ಥೆಯು, ಸಂಬಂಧಿತ ಲೈಸೆನ್ಸುದಾರ ಅಥವಾ ಅನ್ಯಥಾ ಲಭ್ಯವಿರುವ ಸಾಮರ್ಥ್ಯ ಮಾಪನ ಮಾಡಿ ಪದ್ಧತಿ ಅಧ್ಯಯನ ಆಧಾರದ ಮೇಲೆ ಈ ಮುಂದೆ ಉಲ್ಲೇಖಿಸಿರುವ ಕಾಲದ ಅನುಸೂಚಿಯೊಳಗೆ ಅರ್ಜಿದಾರನಿಗೆ ಅದನ್ನು ತಿಳಿಸಬೇಕು :

   ಎ) ಅಲ್ಪಾವಧಿಯ ಮುಕ್ತ ಅವಕಾಶ – ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗೆ.

   ಬಿ) ದೀರ್ಘಾವಧಿಯ ಮುಕ್ತ ಅವಕಾಶ – ಅರ್ಜಿ ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗೆ.

7) ಪದ್ಧತಿಯನ್ನು ಬಲಗೊಳಿಸದ ಹೊರತು ಮುಕ್ತ ಅವಕಾಶಕ್ಕೆ ಅವಕಾಶ ನೀಡಲಾಗದು ಎಂಬ ಅಭಿಪ್ರಾಯವನ್ನು ಸಮೀಕ್ಷಾ ಸಂಸ್ಥೆಯು ಹೊಂದಿದ್ದಲ್ಲಿ ಪದ್ಧತಿಯನ್ನು ಬಲಗೊಳಿಸುವುದಕ್ಕಾಗಿ ಕಾಮಗಾರಿಯ ವ್ಯಾಪ್ತಿಯನ್ನು ಹಾಗೂ ಮುಕ್ತ ಅವಕಾಶಕ್ಕೆ ಅವಕಾಶ ನೀಡುವ ಸಾಧ್ಯತಾ ದಿನಾಂಕವನ್ನು ಗುರುತಿಸತಕ್ಕದ್ದು ಮತ್ತು ಅದರಂತೆ ಅದನ್ನು 30 ದಿನಗಳೊಳಗಾಗಿ ಅರ್ಜಿದಾರನಿಗೆ ತಿಳಿಸತಕ್ಕದ್ದು.

8) ಮುಕ್ತ ಅವಕಾಶದ ಗ್ರಾಹಕನು ತನಗೆ ಅನ್ವಯವಾದಂತೆ ಪ್ರಸರಣ ಮತ್ತು ವಿತರಣಾ ಲೈಸೆನ್ಸುದಾರರು, ವಿದ್ಯುತ್ ಉತ್ಪಾದಕರು, ವಿದ್ಯುತ್ ವ್ಯಾಪಾರದಾರರು, ಗ್ರಾಹಕರು ಮತ್ತು ಇತರರೊಂದಿಗೆ ವಾಣಿಜ್ಯಾತ್ಮಕ ಒಪ್ಪಂದಗಳನ್ನು ಮಾಡಿಕೊಳ್ಳತಕ್ಕದ್ದು. ಅಂತಹ ಒಪ್ಪಂದಗಳಲ್ಲಿ ಭದ್ರತಾ ಸಂಯೋಜನೆಯ ಸಂದಾಯಕ್ಕೆ ಸಂಬಂಧಿಸಿದ ಕಂಡಿಕೆಯು ಸೇರಿರತಕ್ಕದ್ದು.

9) ಸಮೀಕ್ಷಾ ಸಂಸ್ಥೆಯು, ಈ ವಿನಿಯಮಗಳು ಪ್ರಕಟವಾದ 30 ದಿನಗಳೊಳಗೆ ಪ್ರಮಾಣಿತ ಒಪ್ಪಂದದ ನಮೂನೆಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಆಯೋಗದಿಂದ ಯುಕ್ತ ಅನುಮೋದನೆ ಪಡೆದ ನಂತರ, ಈ ಪ್ರಮಾಣಿತ ಒಪ್ಪಂದದ ನಮೂನೆಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು. ಒಪ್ಪಂದದ ನಮೂನೆಗಳನ್ನು ಸಮೀಕ್ಷಾ ಸಂಸ್ಥೆಯ ವೆಬ್‌ಸೈಟಿನಲ್ಲಿ ಪ್ರಕಾಶನಗೊಳಿಸತಕ್ಕದ್ದು.

10) ಆ ಬಗ್ಗೆ ಒಪ್ಪಂದಕ್ಕೆ ಬಂದ ನಂತರ ಅದರ ಪ್ರತಿಗಳನ್ನು ಸಮೀಕ್ಷಾ ಸಂಸ್ಥೆಗೆ ಸಲ್ಲಿಸಬೇಕು. ಸಮೀಕ್ಷಾ ಸಂಸ್ಥೆಯು, ಒಪ್ಪಂದಗಳನ್ನು ಸಲ್ಲಿಸಿದ ದಿನಾಂಕದಿಂದ ಮೂರು ದಿನಗಳೊಳಗೆ ಮುಕ್ತ ಅವಕಾಶವು ಯಾವ ದಿನಾಂಕದಿಂದ ಲಭ್ಯವಾಗುವುದೆಂದು ಮುಕ್ತ ಅವಕಾಶದ ಗ್ರಾಹಕನಿಗೆ ತಿಳಿಸತಕ್ಕದ್ದು.

11) ಎಸ್‌ಟಿಯು/ವಿತರಣಾ ಲೈಸೆನ್ಸುದಾರರು, ದೀರ್ಘಾವಧಿ ಗ್ರಾಹಕರಿಗೆ ಮುಕ್ತ ಅವಕಾಶವನ್ನು ಒದಗಿಸುವುದಕ್ಕಾಗಿ ಆಗಾಗ್ಗೆ ಆಯೋಗ ನಿರ್ದೇಶನ ನೀಡಿದಂತೆ ಅಥವಾ ವಾರ್ಷಿಕ ಪದ್ಧತಿಗಳ ಅಧ್ಯಯನ ನಡೆಸತಕ್ಕದ್ದು. ನಿರಂತರತೆಯ ಆಧಾರದ ಮೇಲೆ ಮಾರ್ಗಗಳ ಹೆಚ್ಚುವರಿ ಲೋಡಿಂಗ್ ಸಾಮರ್ಥ್ಯವು ಸೇರಿದಂತೆ ಪದ್ಧತಿಯ ಮಾಹಿತಿಯನ್ನು ತಹಲ್‌ವರೆಗೆ ಸಿದ್ಧಪಡಿಸಬೇಕು ಮತ್ತು ಅದನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು. ಅಂತಹ ಮಾಹಿತಿಯನ್ನು ಲೈಸೆನ್ಸುದಾರರ ವೆಬ್‌ಸೈಟಿನಲ್ಲಿ ಕೂಡ ಪ್ರಕಟಗೊಳಿಸತಕ್ಕದ್ದು.

ಮೇಲಿನಂತಿದ್ದರೂ, ಯಾವುದೇ ವ್ಯಕ್ತಿಯಿಂದ ಅದರ ಅಧ್ಯಯನ ನಡೆಸಬೇಕೆಂದಿದ್ದರೆ, ಅಂತಹ ವ್ಯಕ್ತಿಯಿಂದ ಸೂಕ್ತ ಶುಲ್ಕ ಸಂಗ್ರಹಣೆ, ಎಸ್‌ಟಿಯು/ವಿತರಣಾ ಲೈಸೆನ್ಸುದಾರನು ಆ ಪದ್ಧತಿ ಅಧ್ಯಯನ ನಡೆಸತಕ್ಕದ್ದು. ಅಧ್ಯಯನಕ್ಕಾಗಿ ಶುಲ್ಕಗಳನ್ನು ಸ್ವೀಕರಿಸಿದ

ದಿನಾಂಕದಿಂದ 90 ದಿನಗಳೊಳಗೆ ಅಂತಹ ಅಧ್ಯಯನ ಪೂರ್ಣಗೊಳಿಸತಕ್ಕದ್ದು ಹಾಗೂ ಅಂತಹ ವ್ಯಕ್ತಿಗೆ ವಿವರವಾದ ವರದಿಯನ್ನು ಒದಗಿಸತಕ್ಕದ್ದು.

10. **ಮುಕ್ತ ಅವಕಾಶದ ಗ್ರಾಹಕರಿಂದ ಮುಕ್ತ ಅವಕಾಶದ ಸೇವೆಯ ಬಳಕೆಯಾಗದಿರುವುದು :**

1) ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕರು ತನಗೆ ಹಂಚಿಕೆಯಾದ ಸಾಮರ್ಥ್ಯದ ಪೂರ್ಣ ಅಥವಾ ಸೂಕ್ತ ಭಾಗ, ನಾಲ್ಕು ಗಂಟೆಗಳಿಗೂ ಹೆಚ್ಚಿನ ಗಂಟೆಗಳ ಕಾಲ ಬಳಸಲು ಅಸಮರ್ಥವಾಗಿದ್ದ ಸಂದರ್ಭದಲ್ಲಿ, ಸಾಮರ್ಥ್ಯ ಬಳಸಲು ಅಸಮರ್ಥತೆ ಮತ್ತು ಅದಕ್ಕೆ ಕಾರಣಗಳೊಂದಿಗೆ ಸಂಬಂಧಿಸಿದ ಎಸ್‌ಎಲ್‌ಡಿಸಿ ಗೆ ತಿಳಿಸತಕ್ಕದ್ದು ಮತ್ತು ತನಗೆ ಹಂಚಿಕೆಯಾಗಿರುವ ಸಾಮರ್ಥ್ಯದ ಬಳಕೆಯನ್ನು ಹಿಂದಕ್ಕೆ ಒಪ್ಪಿಸಬಹುದಾಗಿದೆ. ಆದಾಗ್ಯೂ, ಅಂತಹ ಅಲ್ಪಾವಧಿಯ ಗ್ರಾಹಕನು ಮೂಲ ಮೀಸಲಿನ ಸಾಮರ್ಥ್ಯ ಮತ್ತು ಅಂತಹ ಸಾಮರ್ಥ್ಯದ ಮೀಸಲು ಮಾಡಿದ ಅವಧಿಯ ಆಧಾರದ ಮೇಲೆ ಪ್ರಸರಣ ಮತ್ತು/ಅಥವಾ ವೀಲಿಂಗ್ ಶುಲ್ಕಗಳನ್ನು ಭರಿಸತಕ್ಕದ್ದು.

2) ದೀರ್ಘಾವಧಿ ಗ್ರಾಹಕನು ಸಮೀಕ್ಷಾ ಸಂಸ್ಥೆಯ ಪೂರ್ವಾನುಮೋದನೆಯಿಲ್ಲದೆ ಮುಕ್ತ ಅವಕಾಶದ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ತನ್ನ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಸ್ವಇಚ್ಛೆಯಿಂದ ಕೈಬಿಡುವುದು ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ.

3) ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕನು ಪ್ರತಿ ಬಾರಿಯು 2 ಗಂಟೆಗಳಿಗೂ ಹೆಚ್ಚಿನ ವೇಳೆಯಲ್ಲಿ ಕಡಿಮೆ ಬಳಕೆಯ ಅವಧಿಯೊಂದಿಗೆ ತಿಂಗಳಲ್ಲಿ ಹಂಚಿಕೆಯಾದ ಸಾಮರ್ಥ್ಯವನ್ನು ಎರಡು ಪಟ್ಟಿಗಿಂತಲೂ ಹೆಚ್ಚು ಕಡಿಮೆ ಬಳಕೆಮಾಡಿದಾಗ ಅಥವಾ ಹಂಚಿಕೆಯಾದ ಸಾಮರ್ಥ್ಯವನ್ನು ಬಳಸುವಲ್ಲಿ ತನ್ನ ಅಸಾಮರ್ಥ್ಯವನ್ನು ವಿತರಣ ಲೈಸೆನ್ಸುದಾರನಿಗೆ ತಿಳಿಸುವಲ್ಲಿ ವಿಫಲನಾದಾಗ ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕನು ಹಂಚಿಕೆಯಾದ ವಿದ್ಯುತ್ ಸಾಮರ್ಥ್ಯಕ್ಕಿಂತ ಕಡಿಮೆ ಬಳಸುತ್ತಿದ್ದಲ್ಲಿ ಹಂಚಿಕೆ ಮಾಡಿರುವ ಸಾಮರ್ಥ್ಯವನ್ನು ಎಸ್‌ಎಲ್‌ಡಿಸಿಯು ರದ್ದುಗೊಳಿಸಬಹುದು ಅಥವಾ ಕಡಿಮೆಗೊಳಿಸಬಹುದಾಗಿದೆ. ಅಂತಹ ರದ್ಧತಿಯನ್ನು ಬಾಧಿತ ಪಕ್ಷಕಾರರಿಗೆ ನೋಟೀಸ್ ನೀಡಿದ ನಂತರ ಮಾಡತಕ್ಕದ್ದು.

4) ಈ ಮೇಲಿನ ಕಂಡಿಕೆ (1)ರಡಿಯಲ್ಲಿ ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕನು ಹಂಚಿಕೆಯಾದ ಸಾಮರ್ಥ್ಯವನ್ನು ಹಿಂದಕ್ಕೆ ಒಪ್ಪಿಸಿದ್ದರಿಂದ ಅಥವಾ ಈ ಮೇಲಿನ ಕಂಡಿಕೆ (3) ರಂತೆ ಎಸ್‌ಎಲ್‌ಡಿಸಿಯಿಂದ ಸಾಮರ್ಥ್ಯವನ್ನು ಕಡಿಮೆ ಮಾಡುವುದು ಅಥವಾ ರದ್ದುಗೊಳಿಸಿದ್ದರಿಂದ ಲಭ್ಯವಾಗುವ ಹೆಚ್ಚುವರಿ ಸಾಮರ್ಥ್ಯವನ್ನು ವಿದ್ಯುತ್ ಪಡೆಯುವಿಕೆಯ ಬಿಂದುವಿನ ಆಧಾರದ ಮೇಲೆ ಬಾಕಿಯಿರುವ ಅರ್ಜಿಗಳ ಕ್ರಮಾನುಸರಣೆಯ ಇತರ ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕರಿಗೆ ಹಂಚಿಕೆ ಮಾಡಬಹುದಾಗಿದೆ.

11. ಮುಕ್ತ ಅವಕಾಶದ ಶುಲ್ಕಗಳು.

ಈ ಮುಂದಿನಂತೆ ಮುಕ್ತ ಅವಕಾಶದ ಗ್ರಾಹಕನಿಂದ ಪ್ರಸರಣ/ವಿತರಣ ಪದ್ಧತಿಯ ಬಳಕೆಗಾಗಿ ಶುಲ್ಕಗಳನ್ನು ನಿಯಂತ್ರಿಸತಕ್ಕದ್ದು :

i) ಅಧಿನಿಯಮದ ಪ್ರಕರಣ 39(2)(ಡಿ)(ii) ಮತ್ತು ಪ್ರಸರಣ 40(ಸಿ)(ii) ರಂತೆ ಪ್ರಸರಣ ಲೈಸೆನ್ಸುದಾರರಿಂದ (ರಾಜ್ಯ ಪ್ರಸರಣ ಸಂಸ್ಥೆಯೂ ಸೇರಿದಂತೆ) ಮುಕ್ತ ಅವಕಾಶದಿಂದ ವಿದ್ಯುತ್‌ನ್ನು ಪಡೆದಾಗ, ಅಧಿನಿಯಮದ ಪ್ರಕರಣ 62(1)(ಬಿ) ನಂತೆ ಆಯೋಗದಿಂದ ನಿಗದಿಪಡಿಸಿದ ಪ್ರಸರಣ ಶುಲ್ಕಗಳನ್ನು ಕಾಲಕಾಲಕ್ಕೆ ಅನ್ವಯಿಸತಕ್ಕದ್ದು. ಆಯೋಗವು ಸದ್ಯದ ಸ್ಥಿತಿಗಾಗಿ ಪ್ರಸರಣದ ದರ ನಿಗದಿಪಡಿಸುವುದಕ್ಕಾಗಿ ಪೋಸ್ಟೇಜ್ ಸ್ಟಾಂಪ್ ಪದ್ಧತಿ ಅನುಸರಿಸುವುದು.

ii) ಈ ಮೇಲಿನ ಉಪಕಂಡಿಕೆ (1) ರಂತೆ ಸಂದಾಯ ಮಾಡಬೇಕಿರುವ ಪ್ರಸರಣ ಶುಲ್ಕಗಳ ಜೊತೆಗೆ ಅಧಿನಿಯಮದ ಪ್ರಕರಣ 42(2)ರಂತೆ ವಿತರಣ ಲೈಸೆನ್ಸುದಾರರಿಂದ ಮುಕ್ತ ಅವಕಾಶವನ್ನು ಬಳಸಿಕೊಂಡಲ್ಲಿ, ಅಧಿನಿಯಮದ ಪ್ರಕರಣ 62(1)(ಸಿ)ಯಂತೆ ಆಯೋಗದಿಂದ ನಿಗದಿಯಾದಂತೆ ವೀಲಿಂಗ್ ಶುಲ್ಕಗಳನ್ನು ಕಾಲಕಾಲಕ್ಕೆ ಅನ್ವಯಿಸತಕ್ಕದ್ದು. ಆಯೋಗವು ವಿದ್ಯುತ್ ದರ ಆದೇಶ, 2003ರಲ್ಲಿ ನಿಗದಿಪಡಿಸಿರುವ ವೀಲಿಂಗ್ ಶುಲ್ಕಗಳನ್ನು ಆಯೋಗವು ಹೊಸದಾಗಿ ವೀಲಿಂಗ್ ಶುಲ್ಕಗಳನ್ನು ನಿಗದಿಪಡಿಸುವವರೆಗೆ ಅನ್ವಯಿಸತಕ್ಕದ್ದು.

iii) ಅಂತರಾಜ್ಯ ಪ್ರಸರಣ ಪದ್ಧತಿಯ ಜೊತೆಗೆ ಮುಕ್ತ ಅವಕಾಶದ ಗ್ರಾಹಕನಿಂದ ರಾಜ್ಯದೊಳಗಿನ ಪ್ರಸರಣ ಪದ್ಧತಿ ಅಥವಾ ವಿತರಣ ಪದ್ಧತಿಯನ್ನು ಬಳಸಿದ ಪ್ರಕರಣದಲ್ಲಿ ಅಂತರಾಜ್ಯ ಪ್ರಸರಣ ಶುಲ್ಕದ ಸಂದಾಯದ ಜೊತೆಗೆ ರಾಜ್ಯದೊಳಗಿನ ಪದ್ಧತಿಯ ಬಳಕೆಗಾಗಿ ಪ್ರಸರಣ ಶುಲ್ಕಗಳು ಮತ್ತು ವೀಲಿಂಗ್ ಶುಲ್ಕಗಳನ್ನು ಸಂದಾಯಮಾಡತಕ್ಕದ್ದು.

iv) ಮುಕ್ತ ಅವಕಾಶದಿಂದ ವಿದ್ಯುತ್‌ನ್ನು ಪಡೆದುಕೊಂಡಿದ್ದಲ್ಲಿ, ಅಧಿನಿಯಮದ ಪ್ರಕರಣ 42(2)ರ ಉಪಬಂಧ 1 ರನುಸಾರ ಕ್ರಾಸ್ ಸಬ್ಸಿಡಿಯ ಪ್ರಸಕ್ತದ ಹಂತವನ್ನು ನಿಭಾಯಿಸಲು ಸರ್ಚಾರ್ಜನ್ನು ಸಂದಾಯ ಮಾಡಬೇಕು. ಆಯೋಗವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಮುಕ್ತ ಅವಕಾಶದ ಗ್ರಾಹಕನು ಸರ್ಚಾರ್ಜನ್ನು ಪಾವತಿಸಲು ಬಾಧ್ಯನಾಗತಕ್ಕದ್ದು. ಹಲವು ರೀತಿಯ ಪ್ರವರ್ಗಗಳ ಗ್ರಾಹಕರಿಗೆ ವಿದ್ಯುತ್ ಸರಬರಾಜಿನ ವೆಚ್ಚದ ಆಧಾರದ ಮೇಲೆ ಸರ್ಚಾರ್ಜನ್ನು ಆಯೋಗವು ನಿಗದಿಪಡಿಸುವುದು.

v) ಮುಕ್ತ ಅವಕಾಶದ ಗ್ರಾಹಕನಿಗಾಗಿ ಪ್ರತ್ಯೇಕ ಬಳಕೆಗಾಗಿ ಮುಡುಪಾದ ಪ್ರಸರಣ ಪದ್ಧತಿ ಅಥವಾ ವಿತರಣ ಪದ್ಧತಿಯು ಬಳಕೆಗಾಗಿ ರಚಿಸಿರುವಾಗ ಅಂತಹ ಮುಡುಪಿಟ್ಟ ಪದ್ಧತಿಗಾಗಿ ಪ್ರಸರಣ ಶುಲ್ಕಗಳು ಅಥವಾ ವೀಲಿಂಗ್ ಶುಲ್ಕಗಳನ್ನು ಹೆಚ್ಚುವರಿ ಸಾಮರ್ಥ್ಯದ ಹಂಚಿಕೆ ಮತ್ತು ಇತರ ವ್ಯಕ್ತಿಗಳು ಅಥವಾ ಉದ್ದೇಶಗಳಿಗಾಗಿ ಬಳಸುವವರಿಗೆ ಅಂತಹ ಮುಕ್ತ ಅವಕಾಶದ ಗ್ರಾಹಕನು ಸಂಪೂರ್ಣವಾಗಿ ಭರಿಸತಕ್ಕದ್ದು.

vi) ಮುಕ್ತ ಅವಕಾಶದ ಗ್ರಾಹಕನು ಪ್ರತ್ಯೇಕ ಬಳಕೆಗಾಗಿ ಮುಕ್ತ ಅವಕಾಶವನ್ನು ಒದಗಿಸುವ ಕ್ರಮವಾಗಿ ಪದ್ಧತಿಯನ್ನು ಬಲಪಡಿಸಲು ಭರಿಸಿದ ವೆಚ್ಚಗಳನ್ನು ಆಯಾ ಮುಕ್ತ ಅವಕಾಶದ ಗ್ರಾಹಕನು ಭರಿಸತಕ್ಕದ್ದು.

vii) ಅಧಿನಿಯಮದ ಪ್ರಕರಣ 42(4) ರನುಸಾರ ವೀಲಿಂಗ್ ಶುಲ್ಕಗಳ ಮೇಲೆ ಆಯೋಗ ನಿಗದಿಪಡಿಸಬಹುದಾದಂತೆ ಹೆಚ್ಚುವರಿ ಸರ್ಚಾರ್ಜ್‌ನ್ನು, ಸರಬರಾಜಿನ ಹೊಣೆಗಾರಿಕೆಯಿಂದ ಉಂಟಾಗುವ ವಿತರಣ ಲೈಸೆನ್ಸುದಾರರ ನಿಗದಿತ ವೆಚ್ಚವನ್ನು ನಿಭಾಯಿಸಲು ತನ್ನ ಸರಬರಾಜು ಪ್ರದೇಶದ ವಿತರಣ ಲೈಸೆನ್ಸುದಾರರನ್ನು ಹೊರತುಪಡಿಸಿ, ಮೂಲಗಳಿಂದ ವಿದ್ಯುತ್ ಸರಬರಾಜು ಸ್ವೀಕರಿಸುವುದಕ್ಕಾಗಿ ಮುಕ್ತ ಅವಕಾಶವನ್ನು ಪಡೆಯ ಬಯಸುವ ಗ್ರಾಹಕನು ಸಂದಾಯ ಮಾಡಬೇಕು. ಆಯೋಗವು ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಅಂತಹ ಹೆಚ್ಚುವರಿ ಸರ್ಚಾರ್ಜ್‌ನ್ನು ಮುಕ್ತ ಅವಕಾಶದ ಗ್ರಾಹಕನು ಭರಿಸಲು ಬಾಧ್ಯನಾಗತಕ್ಕದ್ದು. ಆದಾಗ್ಯೂ, ಹೊಸ ಮುಕ್ತ ಅವಕಾಶದ ಗ್ರಾಹಕನ ಪ್ರಕರಣದಲ್ಲಿ (ಅಂದರೆ, ಮುಕ್ತ ಅವಕಾಶದ ಗ್ರಾಹಕನು ಲೈಸೆನ್ಸುದಾರನ ಗ್ರಾಹಕನಾಗಿರದಿದ್ದಲ್ಲಿ) ಅಂತಹ ಹೆಚ್ಚುವರಿ ಸರ್ಚಾರ್ಜ್‌ನ್ನು ಸಂದಾಯ ಮಾಡಬೇಕಾಗಿಲ್ಲ. ಈ ಹೆಚ್ಚುವರಿ ಸರ್ಚಾರ್ಜ್‌ನ್ನು ಪ್ರಕರಣದಿಂದ ಪ್ರಕರಣವಾರು ಆಧಾರದ ಮೇಲೆ ನಿಗದಿಪಡಿಸಲಾಗುವುದು.

viii) ಗ್ರಿಡ್‌ನಿಂದ ವಿದ್ಯುತ್ ಬೆಂಬಲಿತ ಸರಬರಾಜಿನ ವ್ಯವಸ್ಥೆಗಾಗಿ ಒಪ್ಪಂದಿತ ಸರಬರಾಜಿನಲ್ಲಿ ವ್ಯತ್ಯಯ ಉಂಟಾದ ಸಂದರ್ಭದಲ್ಲಿ ಹಾನಿಯನ್ನು ಪರಿಹರಿಸಿಕೊಳ್ಳಲು ಮುಕ್ತ ಅವಕಾಶದ ಗ್ರಾಹಕನು ಶುಲ್ಕಗಳನ್ನು ಸಂದಾಯ ಮಾಡತಕ್ಕದ್ದು. ಬೆಂಬಲಿತ ಶುಲ್ಕಗಳ ಮೊತ್ತದ ಬಗ್ಗೆ ಪಕ್ಷಕಾರರ ನಡುವೆ ಪರಸ್ಪರ ಒಪ್ಪಿಗೆ ನೀಡತಕ್ಕದ್ದು.

ix) ಮುಕ್ತ ಅವಕಾಶದ ವ್ಯವಸ್ಥೆಯಂತೆ ವಿದ್ಯುತ್ ಪಡೆಯುವುದಕ್ಕಾಗಿ ಒಪ್ಪಿತ ಅನುಸೂಚಿಯ ವ್ಯತ್ಯಾಸದೊಂದಿಗೆ ವಿದ್ಯುತ್‌ನ್ನು ಮುಕ್ತ ಅವಕಾಶದ ಗ್ರಾಹಕನು ಪಡದಲ್ಲಿ ಗ್ರಾಹಕನು ಒಪ್ಪಿದ ಅನುಸೂಚಿಯಿಂದ ವ್ಯತ್ಯಾಸದವರೆಗೆ ರಾಜ್ಯದೊಳಗಿನ ಎಬಿಟಿಯಂತೆ ಅನ್ವಯವಾಗುವ ಯು ಎಲ್ ಶುಲ್ಕಗಳನ್ನು ಸಂದಾಯ ಮಾಡತಕ್ಕದ್ದು. ರಾಜ್ಯದೊಳಗಿನ ಎಬಿಟಿಯನ್ನು ಆರಂಭವಾಗುವವರೆಗೆ ಅಂತಾರಾಜ್ಯ ಎಬಿಟಿಯಂತೆ ಯು ಎಲ್ ಶುಲ್ಕಗಳು ಅನ್ವಯವಾಗತಕ್ಕದ್ದು.

x) ಎಸ್ ಎಲ್ ಡಿ ಸಿಯಿಂದ ಅನುಸೂಚಿತವಾಗಿರುವ ಎಲ್ಲಾ ಮುಕ್ತ ಅವಕಾಶದ ಗ್ರಾಹಕರು ಅನುಸೂಚಿತ ಮತ್ತು ಪದ್ಧತಿ ಕಾರ್ಯಾಚರಣೆ ಶುಲ್ಕಗಳನ್ನು ಮುಕ್ತ ಅವಕಾಶದ ಗ್ರಾಹಕರು ಸಂದಾಯ ಮಾಡತಕ್ಕದ್ದು. ಅಂತಹ ಶುಲ್ಕಗಳನ್ನು ಆಯೋಗ ಜಾರಿಗೊಳಿಸುವ ಸಂಬಂಧಿತ ವಿನಿಯಮಗಳಂತೆ ವಿಧಿಸಲಾಗುವುದು.

xi) ಆಯೋಗ ನಿರ್ದಿಷ್ಟಪಡಿಸಬಹುದಾದಂತೆ ಗ್ರಿಡ್ ಬೆಂಬಲಿತ ಶುಲ್ಕಗಳು ಮತ್ತು ಯಾವುದೇ ಇತರ ಶುಲ್ಕಗಳನ್ನು ಮುಕ್ತ ಅವಕಾಶದ ಗ್ರಾಹಕನು ಸಂದಾಯ ಮಾಡತಕ್ಕದ್ದು.

xii) ಸಂದಾಯ ಮಾಡುವುದರಲ್ಲಿ ವಿಫಲವಾಗುವುದರ ವಿರುದ್ಧ ಸಮೀಕ್ಷಾ ಸಂಸ್ಥೆಯ ಭದ್ರತೆಗಾಗಿ ಮುಕ್ತ ಅವಕಾಶದ ಗ್ರಾಹಕನು ಸಂಬಂಧಿತ ಸಮೀಕ್ಷಾ ಸಂಸ್ಥೆಗೆ ಭದ್ರತಾ ಠೇವಣಿಯಾಗಿ ಅನ್ವಯವಾಗುವ ಎರಡು ತಿಂಗಳ ಶುಲ್ಕಗಳನ್ನು ಸಂದಾಯಮಾಡತಕ್ಕದ್ದು.

xiii) ಆಯೋಗವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತೆ ಗ್ರಿಡ್‌ನಿಂದ ಪ್ರತಿಕ್ರಿಯಾತ್ಮಕ ವಿದ್ಯುತ್ ಪಡೆಯುವ ಮುಕ್ತ ಅವಕಾಶದ ಗ್ರಾಹಕನು ಪ್ರತಿ ಕ್ರಿಯಾತ್ಮಕ ವಿದ್ಯುತ್ ಶುಲ್ಕಗಳನ್ನು ಸಂದಾಯಮಾಡತಕ್ಕದ್ದು.

xiv) ಲೇವಾದೇವಿಶುಲ್ಕಗಳು : ಲೇವಾದೇವಿಯನ್ನು ನಿರ್ವಹಿಸುವ ಸಮೀಕ್ಷಾ ಸಂಸ್ಥೆಗೆ ಮುಕ್ತ ಅವಕಾಶದ ಗ್ರಾಹಕನು ಮಾಸಿಕ ವಾಚನಕ್ಕಾಗಿ ಮಾಸಿಕ ಲೇವಾದೇವಿ ಶುಲ್ಕಗಳು ಮತ್ತು ಲೇವಾದೇವಿ ವಿವರಗಳನ್ನು ನಿರ್ವಹಿಸುವುದಕ್ಕಾಗಿ ಶುಲ್ಕಗಳನ್ನು ಸಂದಾಯಮಾಡತಕ್ಕದ್ದು.

12. ಸಂಕ್ಷೇಪಿಸಿದ ಆದ್ಯತೆ :

ಪ್ರಸರಣ/ವಿತರಣ ಪದ್ಧತಿಯಲ್ಲಿ ಬೇರೆ ರೀತಿಯ ಕಾರಣಗಳಿಂದ ಅಥವಾ ಅಡಚಣೆಯುಂಟಾದ ಪ್ರಕರಣದಲ್ಲಿ ಮೊದಲು ಅಲ್ಪಾವಧಿಯ ಮುಕ್ತ ಅವಕಾಶದ ಗ್ರಾಹಕರಿಗೆ ಸೇವೆಯನ್ನು ಸಂಕ್ಷೇಪಿಸಿದ ನಂತರ ದೀರ್ಘಾವಧಿಯ ಗ್ರಾಹಕರಿಗೆ ಸೇವೆಯನ್ನು ಕಡಿಮೆಗೊಳಿಸುವುದು ಅಗತ್ಯವಾಗಿದೆ, ಪರಂತು, ಪ್ರವರ್ಗದೊಳಗೆ ಮುಕ್ತ ಅವಕಾಶದ ಗ್ರಾಹಕನು ಆದ್ಯತೆಯಲ್ಲಿ ಸಮಾನವಾಗಿ ವಿದ್ಯುತ್‌ನ್ನು ಕಡಿಮೆಗೊಳಿಸುವುದನ್ನು ಹೊಂದಿರಬೇಕು ಮತ್ತು ಈ ಸಂದರ್ಭದಲ್ಲಿ ಸಮನ್ವಯಮಾಡುವ ಸಮೀಕ್ಷಾ ಸಂಸ್ಥೆಯು ಅದೇ ಆಧಾರದ ಮೇಲೆ ಸಂಕ್ಷೇಪಗೊಳಿಸತಕ್ಕದ್ದು.

13. ಮಾಹಿತಿ ಪದ್ಧತಿ :

1. ಎಸ್ ಎಲ್ ಡಿ ಸಿ ಯು "ಮುಕ್ತ ಅವಕಾಶದ ಮಾಹಿತಿ" ಹೆಸರಿನಲ್ಲಿ ಪ್ರತ್ಯೇಕ ವೆಬ್‌ಸೈಟಿನಲ್ಲಿ ಮುಂದೆ ಹೇಳುವ ಮಾಹಿತಿಯನ್ನು ಆಳವಡಿಸತಕ್ಕದ್ದು ಮತ್ತು ಅಂತಹ ಮಾಹಿತಿಯನ್ನು ಒಳಗೊಂಡ ಮಾಸಿಕ ಮತ್ತು ವಾರ್ಷಿಕ ವರದಿಯನ್ನೂ ಕೂಡ ಬಿಡುಗಡೆಗೊಳಿಸತಕ್ಕದ್ದು.

ಅ) ದೀರ್ಘಾವಧಿ ಗ್ರಾಹಕರ ಮೇಲೆ ಯಥಾ ವರದಿ

ಆ) ಅಲ್ಪಾವಧಿಯ ಗ್ರಾಹಕರ ಮೇಲೆ ಯಥಾ ವರದಿ

ಇ) ನಿಬಂಧನೆಯ ಪ್ರಕರಣದಲ್ಲಿ ಬಿಡ್ಡಿಂಗ್‌ಗಾಗಿ ಮೂಲ ದರ

ಈ) ಇ ಹೆಚ್ ವಿ ಮತ್ತು ಹೆಚ್ ವಿ ಮಾರ್ಗಗಳಲ್ಲಿ ಹರಿಯುವ ಗರಿಷ್ಠ ಲೋಡು

ಉ) ಮಾಸಿಕ ಆಧಾರದ ಮೇಲೆ ಲೈಸೆನ್ಸುದಾರ/ರಿಂದ ನಿಗದಿಮಾಡುವಂತೆ ಪ್ರಸರಣ ಪದ್ಧತಿ ಮತ್ತು ವಿತರಣ ಪದ್ಧತಿಯಲ್ಲಿನ ಸರಾಸರಿ ನಷ್ಟಕ್ಕೆ ಸಂಬಂಧಿಸಿದ ಮಾಹಿತಿ.

2. ಸ್ಥಿತಿಯಲ್ಲಾದ ಯಾವುದೇ ಬದಲಾವಣೆಯಾದ ತಹಲ್‌ವರೆಗಿನ ಮಾಹಿತಿಯನ್ನು ಆಳವಡಿಸತಕ್ಕದ್ದು.

3. ವೆಬ್ ಸೈಟಿನಲ್ಲಿ ಹಿಂದಿನ ಎಲ್ಲಾ ವರದಿಗಳು ಲಭ್ಯವಿರತಕ್ಕದ್ದು.

4. ಎಸ್ ಎಲ್ ಡಿ ಸಿ ಯು. ಏಪ್ರಿಲ್ 2005 ರೊಳಗೆ ತನ್ನ ವೆಬ್‌ಸೈಟಿನಲ್ಲಿ ಮೇಲಿನ ಮಾಹಿತಿಯನ್ನು ಆಳವಡಿಸಬೇಕು ಮತ್ತು ಅದನ್ನು ನಿರಂತರವಾಗಿ ಆಯಾ ಸಮಯದ ಮಾಹಿತಿಯನ್ನು ಆಳವಡಿಸತಕ್ಕದು.

14 ವಿವಾದಗಳ ನಿರ್ಣಯ :

1) ಮುಕ್ತ ಅವಕಾಶಕ್ಕೆ ಸಂಬಂಧಿಸಿದ ಎಲ್ಲಾ ವಿವಾದಗಳು ಮತ್ತು ದೂರುಗಳನ್ನು ತನಿಖೆ ಮಾಡುವ ಮತ್ತು ದೂರುಗಳನ್ನು ಪರಿಹರಿಸಲು ಪ್ರಯತ್ನಿಸುವ ಎಸ್ ಎಲ್ ಡಿ ಸಿ ಗೆ ಸಲ್ಲಿಸತಕ್ಕದ್ದು.

2) ಎಸ್ ಎಲ್ ಡಿ ಸಿ ಯು ದೂರುಗಳನ್ನು ಪರಿಹರಿಸಲು ಅಸಮರ್ಥವಾದಲ್ಲಿ, ಪರಿಹರಿಸುವುದಕ್ಕಾಗಿ ಅದನ್ನು ಆಯೋಗಕ್ಕೆ ಒಪ್ಪಿಸಬಹುದಾಗಿದೆ.

15. ವಿಶೇಷ ವಿದ್ಯುತ್ ಮಾಪಕಗಳು :

1. ಮುಕ್ತ ಅವಕಾಶದ ಗ್ರಾಹಕರು ತಮ್ಮ ಸ್ಥಾಪನೆಗಳಿಗೆ ದಿನದಲ್ಲಿ ವಿದ್ಯುತ್ ಬಳಸಿದ ಸಮಯ ದಾಖಲಿಸುವ ಸೌಲಭ್ಯವಿರುವ ಟ್ರೈವೆಕ್ಟರ್ ಮಾಪಕಗಳನ್ನು ಅಳವಡಿಸಿಕೊಳ್ಳತಕ್ಕದ್ದು.

2. ಮಾಪಕಗಳು ಕಾಲ ವ್ಯತ್ಯಾಸದ ಬಳಕೆಗಳ (15 ನಿಮಿಷಗಳು) ಅಗತ್ಯ ಮಾನದಂಡಗಳ ಸಾಮರ್ಥ್ಯ ಹೊಂದಿರತಕ್ಕದು. ಈ ಮಾಪಕಗಳನ್ನು ಯಾವಾಗಲೂ ಉತ್ತಮ ಸ್ಥಿತಿಯಲ್ಲಿರುವಂತೆ ನಿರ್ವಹಿಸತಕ್ಕದು ಮತ್ತು ಸಮೀಕ್ಷಾ ಸಂಸ್ಥೆಯ ಯಾವುದೇ ಅಧಿಕೃತ ವ್ಯಕ್ತಿಯಿಂದ ತಪಾಸಣೆಗೆ ಮುಕ್ತವಾಗಿರತಕ್ಕದು.

3. ಮಾಪಕ ಎಂದರೆ ಸಿಟಿಗಳು, ಪಿಟಿಗಳು ಮತ್ತು ಸಂಬಂಧಿತ ಉಪಕರಣಗಳು ಸೇರಿರತಕ್ಕದ್ದು ಮತ್ತು ಕನಿಷ್ಠ ವರ್ಷಕ್ಕೊಮ್ಮೆಯಾದರೂ ಅದನ್ನು ತಪಾಸಣೆ ಮತ್ತು ಅದರ ಸಾಮರ್ಥ್ಯವನ್ನು ಪರಿಶೀಲಿಸತಕ್ಕದ್ದು.

4. ತನ್ನ ಪ್ರದೇಶದಲ್ಲಿ ಬರುವ ಗ್ರಾಹಕನ ಸ್ಥಾಪನದ ಮಾಪಕವನ್ನು ವಿತರಣ ಲೈಸೆನ್ಸುದಾರನು ಮೊಹರು ಹಾಕತಕ್ಕದ್ದು.

5. ಪ್ರಸರಣ/ವಿತರಣ ಲೈಸೆನ್ಸುದಾರರಿಂದ ಮಾಪಕ ಒದಗಿಸಿದ್ದ ಪಕ್ಷದಲ್ಲಿ ಮುಕ್ತ ಅವಕಾಶದ ಗ್ರಾಹಕನು ಅದರ ಬಾಡಿಗೆ ಮತ್ತು ಭದ್ರತಾ ಠೇವಣಿಯನ್ನು ಸಂದಾಯ ಮಾಡತಕ್ಕದ್ದು.

6. ಮಾಪಕವು ವಾಸ್ತವ ಸಮಯದ ಆಧಾರದ ಮೇಲೆ ಅದರ ವಾಚನವನ್ನು ಎಸ್ ಎಲ್ ಡಿ ಸಿ ಗೆ ತಲುಪಿಸುವ ಸಾಮರ್ಥ್ಯ ಹೊಂದಿರತಕ್ಕುದು.

7. ರಾಜ್ಯದಲ್ಲಿರುವ ಮಾಪನ ಸಂಹಿತೆಯು ಮುಕ್ತ ಅವಕಾಶದ ಗ್ರಾಹಕರಿಗೂ ಕೂಡ ಅನ್ವಯವಾಗತಕ್ಕುದು.

16. ವಿದ್ಯುತ್ ನಷ್ಟಗಳು

ಪ್ರಸರಣ ಮತ್ತು ವಿತರಣಾ ಪದ್ಧತಿಯ ವಿದ್ಯುತ್ ನಷ್ಟಗಳನ್ನು ಆಯೋಗವು ಆಗಾಗ್ಗೆ ನಿರ್ದಿಷ್ಟಪಡಿಸುವ ರೀತಿಯನುಸಾರ ಲೆಕ್ಕಾಚಾರ ಮಾಡತಕ್ಕುದು. ವಿದ್ಯುತ್ ದರ ಆದೇಶ 2003ರಲ್ಲಿ ನಿಗದಿಪಡಿಸಿರುವ ನಷ್ಟಗಳನ್ನು ಪ್ರಸಕ್ತದಲ್ಲಿಯೂ ಅನ್ವಯಿಸತಕ್ಕುದು.

17. ಗ್ರಿಡ್ ಸಂಹಿತೆ/ವಿತರಣಾ ಸಂಹಿತೆಯ ಪಾಲನೆ.

ಮುಕ್ತ ಅವಕಾಶದ ಗ್ರಾಹಕನು ಆಗಾಗ್ಗೆ ಅನ್ವಯವಾಗುವ ರಾಜ್ಯ ಗ್ರಿಡ್ ಸಂಹಿತೆ, ವಿತರಣಾ ಸಂಹಿತೆ ಮತ್ತು ಇತರ ಎಲ್ಲಾ ಸಂಹಿತೆಗಳು ಮತ್ತು ಗುಣಮಟ್ಟಗಳಿಗೆ ಬದ್ಧವಾಗಿರತಕ್ಕುದು.

18. ಶುಲ್ಕಗಳ ಸಂಗ್ರಹಣೆ ಮತ್ತು ವಿತರಣೆ

ಮುಕ್ತ ಅವಕಾಶದ ಗ್ರಾಹಕರಿಗೆ ಸಂಬಂಧಪಟ್ಟ ಶುಲ್ಕಗಳನ್ನು ಸಂಬಂಧಿಸಿದ ಸಮೀಕ್ಷಾ ಸಂಸ್ಥೆಗೆ ನೇರವಾಗಿ ಸಂದಾಯ ಮಾಡತಕ್ಕುದು. ಸಮೀಕ್ಷಾ ಸಂಸ್ಥೆಯು ಹಣ ಸಂದಾಯ ಮಾಡುವ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸತಕ್ಕುದು.

19. ವರದಿಗಳು

ವಿತರಣಾ ಲೈಸೆನ್ಸುದಾರರು ಈ ಮುಂದಿನ ನಮೂನೆಯಲ್ಲಿ ಇಆರ್‌ಸಿ ಅಥವಾ ಆಯೋಗ ಕೋರುವಂತೆ ವರದಿಯನ್ನು ಸಲ್ಲಿಸತಕ್ಕುದು :

ಅನುಸೂಚಿ

| ಕ್ರಮ ಸಂಖ್ಯೆ | ಮುಕ್ತ ಅವಕಾಶದ ಗ್ರಾಹಕನ ಹೆಸರು ಮತ್ತು ವಿಳಾಸ | ಇಂಜೆಕ್ಷನ್ನಿನ ಬಿಂದು | ವಿದ್ಯುತ್ ಪಡೆಯುವ ಬಿಂದು | ಅನುಮತಿ ಸಿಗುವ ಸಾಮರ್ಥ್ಯ (ಮೆ. ವಾ.) | ಮುಕ್ತ ಅವಕಾಶಕ್ಕೆ ಅನುಮತಿಸಿರುವ ಅವಧಿ | ವಾಸ್ತವ ಬಳಕೆ ಎಂ.ಯು. ಗಳಲ್ಲಿ |
|---|---|---|---|---|---|---|
| | | | | | | |

20. ಇತರೆ

1. ಸಂಪರ್ಕ ಸೌಲಭ್ಯ

ಮುಕ್ತ ಅವಕಾಶದ ಗ್ರಾಹಕನು ದೂರವಾಣಿ, ಫ್ಯಾಕ್ಸ್ ಮತ್ತು ಇ-ಅಂಚೆ ಸೌಲಭ್ಯಗಳನ್ನು ಹೊಂದಿರತಕ್ಕದ್ದು ಹಾಗೂ ತನ್ನ ಸಂಪರ್ಕ ಪದ್ಧತಿಗಳ ವಿವರಗಳನ್ನು ಎಸ್‌ಎಲ್‌ಡಿಸಿ ಮತ್ತು ಸಮೀಕ್ಷಾ ಸಂಸ್ಥೆಗೆ ಒದಗಿಸತಕ್ಕದ್ದು.

2. ಆದೇಶಗಳು ಮತ್ತು ಆಚರಣಾ ನಿರ್ದೇಶನಗಳ ನೀಡಿಕೆ.

ಈ ವಿನಿಯಮಗಳು ಮತ್ತು ವಿದ್ಯುಚ್ಛಕ್ತಿ ಅಧಿನಿಯಮ 2003ರ ಉಪಬಂಧಗಳಿಗೊಳಪಟ್ಟು, ಆಯೋಗವು ವಿನಿಯಮಗಳ ಅನುಷ್ಠಾನ ಮತ್ತು ಅನುಸರಿಸಬೇಕಾದ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಆದೇಶಗಳು ಮತ್ತು ಆಚರಣಾ ನಿರ್ದೇಶನಗಳನ್ನು ಕಾಲಕಾಲಕ್ಕೆ ನೀಡಬಹುದಾಗಿದೆ.

3. ಅಡಚಣೆಗಳನ್ನು ನಿವಾರಿಸುವ ಅಧಿಕಾರ.

i) ಈ ವಿನಿಯಮಗಳ ಯಾವುದೇ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ಅಡಚಣೆಯುಂಟಾದ ಪಕ್ಷದಲ್ಲಿ, ಅಡಚಣೆ ನಿವಾರಿಸುವ ಉದ್ದೇಶಕ್ಕಾಗಿ ಅಗತ್ಯ ಅಥವಾ ಯಥೋಚಿತವೆಂದು ಆಯೋಗಕ್ಕೆ ತೋರುವ ವಿದ್ಯುಚ್ಛಕ್ತಿ ಅಧಿನಿಯಮ,

2003ರ ಉಪಬಂಧಗಳಿಗೆ ಅಸಂಗತವಾಗದೇ ಮುಕ್ತ ಅವಕಾಶದ ಗ್ರಾಹಕರು, ವಿದ್ಯುತ್ ಉತ್ಪಾದಕರು ಮತ್ತು ಲೈಸೆನ್ಸುದಾರರಿಗೆ ಆಯೋಗವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶನ ನೀಡಬಹುದಾಗಿದೆ.

ii) ಮುಕ್ತ ಅವಕಾಶದ ಗ್ರಾಹಕರು, ವಿದ್ಯುತ್ ಉತ್ಪಾದಕರು ಮತ್ತು ಲೈಸೆನ್ಸುದಾರರು ಈ ವಿನಿಯಮಗಳನ್ನು ಅನುಷ್ಠಾನಗೊಳಿಸುವಲ್ಲಿ ಉಂಟಾಗಬಹುದಾದ ಯಾವುದೇ ಅಡಚಣೆಗಳನ್ನು ತೊಡೆಯುವುದಕ್ಕಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸಿ, ಸೂಕ್ತ ಆದೇಶಕ್ಕಾಗಿ ಕೋರಬಹುದಾಗಿದೆ.

4. ತಿದ್ದುಪಡಿಯ ಅಧಿಕಾರ :

ಆಯೋಗವು ಅವಶ್ಯವಾದ ವ್ಯವಹರಣೆಗಳನ್ನು ಪಾಲಿಸಿದ ನಂತರ ಈ ವಿನಿಯಮಗಳ ಯಾವುದೇ ಉಪಬಂಧಗಳಿಗೆ ಸೇರಿಸುವ, ವ್ಯತ್ಯಾಸಗೊಳಿಸುವ, ಬದಲಾಯಿಸುವ, ಮಾರ್ಪಾಡಿಸುವ ಅಥವಾ ತಿದ್ದುಪಡಿಗಳನ್ನು ಕಾಲಕಾಲಕ್ಕೆ ಮಾಡಬಹುದಾಗಿದೆ.

ಆಯೋಗದ ಆದೇಶದ ಮೇರೆಗೆ

ಸಹಿ

ಕಾರ್ಯದರ್ಶಿ